## *ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ*

ಬೆಂಗಳೂರು–560001

ಅಧಿಸೂಚನೆ ಸಂಖ್ಯೆ: ವೈ/02/15/1143 ದಿನಾಂಕ 05.10.2015

# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮುಕ್ತ ಅವಕಾಶಕ್ಕೆ ನಿಬಂಧನೆಗಳು ಮತ್ತು ಷರತ್ತುಗಳು) (ಮೂರನೇ ತಿದ್ದುಪಡಿ) ವಿನಿಯಮಗಳು, 2015

**ಪೀಠಿಕೆ:**

ಆಯೋಗವು, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮುಕ್ತ ಅವಕಾಶಕ್ಕಾಗಿ ನಿಬಂಧನೆಗಳು ಮತ್ತು ಷರತ್ತುಗಳು) ವಿನಿಯಮಗಳು, 2004ಕ್ಕೆ ಈ ಮುಂದಿನ ತಿದ್ದುಪಡಿಗಳನ್ನು ಮಾಡುವುದಕ್ಕಾಗಿ ವಿದ್ಯುಚ್ಛಕ್ತಿ ಅಧಿನಿಯಮ 2003ರ 181ನೇ ಪರಿಚ್ಛೇದ (3)ನೇ ಉಪಪರಿಚ್ಛೇದದ ಅಡಿಯಲ್ಲಿ ಅಗತ್ಯಪಡಿಸಿರುವಂತೆ ಕರಡು ವಿನಿಯಮಗಳನ್ನು ಹೊರಡಿಸಿ ಭಾಗೀದಾರರಿಂದ ಅಭಿಪ್ರಾಯ, ಅನಿಸಿಕೆ ಮತ್ತು ಸಲಹೆಗಳನ್ನು ನೀಡುವಂತೆ ಆಹ್ವಾನಿಸಿತ್ತು. ಆಯೋಗವು ಈ ವಿಷಯದಲ್ಲಿ ದಿನಾಂಕ: 12.08.2015ರಂದು ಸಾರ್ವಜನಿಕ ವಿಚಾರಣೆಯನ್ನು ಸಹ ನಡೆಸಿತ್ತು. ಭಾಗೀದಾರರ ಅನಿಸಿಕೆ, ಅಭಿಪ್ರಾಯ ಮತ್ತು ಸಲಹೆಗಳನ್ನು ಪರಿಗಣಿಸಿದ ನಂತರ, ಆಯೋಗವು ವಿದ್ಯುಚ್ಛಕ್ತಿ ಅಧಿನಿಯಮ, 2003ರ 39 (2) (ಡಿ), 40 (ಸಿ), 42 (2), 42 (3), 42 (4), 86 (1) (ಎ) ಮತ್ತು 86 (1) (ಸಿ)ನೇ ಪರಿಚ್ಛೇದಗಳೊಡನೆ ಓದಿಕೊಂಡು, 181ನೇ ಪರಿಚ್ಛೇದದ (1)ನೇ ಉಪಪರಿಚ್ಛೇದದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಈ ಕೆಳಕಂಡ ವಿನಿಯಮಗಳನ್ನು ರಚಿಸುತ್ತದೆ, ಎಂದರೆ:–

**1. ಶೀರ್ಷಿಕೆ ಮತ್ತು ಪ್ರಾರಂಭ.–**

(i) ಈ ವಿನಿಯಮಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮುಕ್ತ ಅವಕಾಶಕ್ಕಾಗಿ ನಿಬಂಧನೆಗಳು ಮತ್ತು ಷರತ್ತುಗಳು) (ಮೂರನೇ ತಿದ್ದುಪಡಿ) ವಿನಿಯಮಗಳು, 2015 ಎಂದು ಕರೆಯತಕ್ಕದ್ದು.

(ii) ಈ ವಿನಿಯಮಗಳು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರುತ್ತದೆ.

**2. 8ನೇ ವಿನಿಯಮದ ಬದಲಿಗೆ ಸೇರ್ಪಡೆ.–**

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮುಕ್ತ ಅವಕಾಶಕ್ಕಾಗಿ ನಿಬಂಧನೆಗಳು ಮತ್ತು ಷರತ್ತುಗಳು) ವಿನಿಯಮಗಳು, 2004ರ (ಇಲ್ಲಿ ಇನ್ನುಮುಂದೆ ಮೂಲ ವಿನಿಯಮಗಳು ಎಂದು ಉಲ್ಲೇಖಿಸಲಾಗಿದೆ) 8ನೇ ವಿನಿಯಮಕ್ಕೆ ಬದಲಾಗಿ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

**"8. ನೋಡಲ್ ಏಜೆನ್ಸಿ.–**

(1) ರಾಜ್ಯ ಲೋಡ್ ವಿತರಣಾ ಕೇಂದ್ರವು (ಎಸ್‌ಎಲ್‌ಡಿಸಿ) ಮುಕ್ತ ಅವಕಾಶವನ್ನು ವ್ಯವಸ್ಥೆಗೊಳಿಸುವುದಕ್ಕಾಗಿ ನೋಡಲ್ ಏಜೆನ್ಸಿಯಾಗಿ ಇರತಕ್ಕದ್ದು.

(2) ಪ್ರಸರಣಾ ಲೈಸೆನ್ಸ್‌ದಾರ(ರು) ಮತ್ತು ವಿತರಣಾ ಲೈಸೆನ್ಸ್‌ದಾರ(ರು), ಎಸ್‌ಎಲ್‌ಡಿಸಿಯ ಸಮನ್ವಯದೊಡನೆ ಈ ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಕಾಲಮಿತಿಯೊಳಗೆ ಖಚಿತವಾಗಿ ಮುಕ್ತ ಅವಕಾಶವನ್ನು ನೀಡತಕ್ಕದ್ದು."

**3. 9ನೇ ವಿನಿಯಮದ ಬದಲಿಗೆ ಸೇರ್ಪಡೆ.–**

ಮೂಲ ಅಧಿನಿಯಮದ ವಿನಿಯಮಗಳ 9ನೇ ವಿನಿಯಮಕ್ಕೆ ಬದಲಾಗಿ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

**"9. ಒಂದು ದಿನ ಮುಂಚಿತವಾದ ವ್ಯವಹಾರಗಳನ್ನು ಹೊರತುಪಡಿಸಿದ ಮುಕ್ತ ಅವಕಾಶದ ನೀಡಿಕೆಗಾಗಿ ಕಾರ್ಯವಿಧಾನ.–**

(1) ಮುಕ್ತ ಅವಕಾಶಕ್ಕೆ ಕೋರಿರುವ ವಿದ್ಯುತ್ ಸಾಮರ್ಥ್ಯಕ್ಕೆ (ವಿದ್ಯುತ್ ಪ್ರಮಾಣಕ್ಕೆ) ಸಂಬಂಧಿಸಿದಂತೆ ವಿದ್ಯುತ್ ಖರೀದಿ ಒಪ್ಪಂದ (ಪಿಪಿಎ) ಅಥವಾ ಸಾಮರ್ಥ್ಯಕ್ಕಾಗಿ ದ್ವಿಪಕ್ಷೀಯ ಒಪ್ಪಂದವನ್ನು (ವಿದ್ಯುಚ್ಛಕ್ತಿ ಪ್ರಮಾಣ) ಮಾಡಿಕೊಂಡಿರುವುದಿಲ್ಲವೆಂಬ ಮುಚ್ಚಳಿಕೆ ಸಹಿತ ಮತ್ತು ದೀರ್ಘಾವಧಿಯ ಮುಕ್ತ ಅವಕಾಶಕ್ಕಾಗಿ ಐದು ಸಾವಿರ ರೂಪಾಯಿಗಳ ಮತ್ತು ಅಲ್ಪಾವಧಿಯ ಮುಕ್ತ ಅವಕಾಶಕ್ಕಾಗಿ ಒಂದು ಸಾವಿರ ರೂಪಾಯಿಗಳ ಹಿಂದಿರುಗಿಸಲಾಗದ ಪ್ರಕ್ರಿಯಾ ಶುಲ್ಕದ (ಇ.ಎಂ.ಡಿ.) ಸಂದಾಯದೊಡನೆ, ನೋಡೆಲ್ ಏಜೆನ್ಸಿಯು ನಿರ್ದಿಷ್ಟಪಡಿಸಿದ ಮತ್ತು ಆಯೋಗವು ಅನುಮೋದಿಸಿದ ನಮೂನೆಯಲ್ಲಿ ಮುಕ್ತ ಅವಕಾಶಕ್ಕಾಗಿ

ಅರ್ಜಿಯನ್ನು, ಮುಕ್ತ ಅವಕಾಶವನ್ನು ಕೋರುವ ಗ್ರಾಹಕನು ಅಗತ್ಯವಿರುವ ಎಲ್ಲಾ ವಿವರಗಳೊಡನೆ ಸಲ್ಲಿಸತಕ್ಕದ್ದು:

ಪರಂತು, ಇನ್ನುಮುಂದೆ ಕಾರ್ಯಾರಂಭ ಮಾಡಬೇಕಾಗಿರುವ ವಿದ್ಯುತ್ ಸ್ಥಾವರದ(ಗಳ) ಅಥವಾ ಅದರ ಉತ್ಪಾದನಾ ಘಟಕದ(ಗಳ) ಸಂಬಂಧದಲ್ಲಿ ಅಲ್ಪಾವಧಿಯ ಮುಕ್ತ ಅವಕಾಶಕ್ಕಾಗಿ ಅರ್ಜಿಯನ್ನು ಅಂಥ ವಿದ್ಯುತ್ ಸ್ಥಾವರದ(ಗಳ) ಅಥವಾ ಅದರ ಉತ್ಪಾದನಾ ಘಟಕದ(ಗಳ) ಪ್ರಾರಂಭ ದಿನಾಂಕದ ಎರಡು ತಿಂಗಳಿಗಿಂತ ಮೊದಲು ಸಲ್ಲಿಸತಕ್ಕದ್ದಲ್ಲ:

ಮತ್ತು ಪರಂತು, ದೀರ್ಘಾವಧಿಯ ಮುಕ್ತ ಅವಕಾಶಗಳಿಗಾಗಿ ಅರ್ಜಿಯನ್ನು, ಪ್ರತಿಯೊಂದು ಮೆಗಾ ವ್ಯಾಟ್‌ಗೆ ಹತ್ತು ಸಾವಿರ ರೂಪಾಯಿಗಳ ಬ್ಯಾಂಕ್ ಖಾತರಿ (ಬಿಜಿ)ಯೊಡನೆ ಸಲ್ಲಿಸತಕ್ಕದ್ದು ಮತ್ತು ಅದು, ವಿದ್ಯುಚ್ಛಕ್ತಿಯ ವೀಲಿಂಗ್ ಒಪ್ಪಂದ ಸಹಿಮಾಡುವವರೆಗೆ ಸಿಂಧುವಾಗಿರತಕ್ಕದ್ದು ಮತ್ತು ಅಸ್ತಿತ್ವದಲ್ಲಿರತಕ್ಕದ್ದು ಮತ್ತು ಒಂದು ವೇಳೆ ಅಂಥ ಒಪ್ಪಂದಕ್ಕೆ ಸಹಿ ಮಾಡುವುದಕ್ಕೆ ಮೊದಲು ಅರ್ಜಿದಾರನು ತನ್ನ ಅರ್ಜಿಯನ್ನು ಹಿಂದಕ್ಕೆ ಪಡೆದರೆ, ಅಂಥ ಬ್ಯಾಂಕ್ ಖಾತರಿ (ಬಿಜಿ)ಯನ್ನು ನೋಡಲ್ ಏಜೆನ್ಸಿಯು ನಗದೀಕರಿಸಿಕೊಳ್ಳತಕ್ಕದ್ದು ಮತ್ತು ವಿದ್ಯುಚ್ಛಕ್ತಿಯ ವೀಲಿಂಗ್ ಒಪ್ಪಂದಕ್ಕೆ ಸಹಿ ಮಾಡಿದ ಮೇಲೆ, ನೋಡಲ್ ಏಜೆನ್ಸಿಯು ಬ್ಯಾಂಕ್ ಖಾತರಿ (ಬಿಜಿ)ಯನ್ನು ಕೂಡಲೇ ಅರ್ಜಿದಾರನಿಗೆ ಹಿಂದಿರುಗಿಸತಕ್ಕದ್ದು:

ಮತ್ತೂ ಪರಂತು, ಅರ್ಜಿದಾರನು ಸಲ್ಲಿಸಿದ ಅರ್ಜಿಗೆ ಅನುಸಾರವಾಗಿ ಮುಕ್ತ ಅವಕಾಶಕ್ಕೆ ಮಂಜೂರಾತಿ ನೀಡಿದ ತರುವಾಯ, ವಿದ್ಯುಚ್ಛಕ್ತಿ ಇಂಜೆಕ್ಷನ್ ಮಾಡುವ ಸ್ಥಳದಲ್ಲಿ  ಯಾವುದೇ ಮುಖ್ಯ ಬದಲಾವಣೆ ಮಾಡಿದ್ದಲ್ಲಿ ಅಥವಾ ರಾಜ್ಯದ ಪ್ರಸರಣ ವ್ಯವಸ್ಥೆಯನ್ನು ಮತ್ತು ಅಥವಾ ವಿತರಣಾ ವ್ಯವಸ್ಥೆಯನ್ನು ಬಳಸಿಕೊಂಡು, ಪರಸ್ಪರ ಬದಲಾವಣೆಯಾಗಬೇಕಾದ ವಿದ್ಯುತ್ತಿನ ಪ್ರಮಾಣದಲ್ಲಿ ಶೇಕಡಾ ಹತ್ತಕ್ಕಿಂತ ಹೆಚ್ಚು ಪ್ರಮಾಣದ ವ್ಯತ್ಯಾಸ ಇದ್ದಲ್ಲಿ, ವ್ಯವಸ್ಥೆಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಸಂಪೂರ್ಣ ಸಾಮರ್ಥ್ಯಕ್ಕೆ ಸಂಬಂಧಿಸಿದಂತೆ ಹೊಸದಾಗಿ ಅರ್ಜಿಯನ್ನು ಸಲ್ಲಿಸಕ್ಕದ್ದು ಮತ್ತು ಅಂಥ ಅರ್ಜಿಯ ಜೊತೆಗೆ ಸಂಬಂಧಪಟ್ಟ ದಾಖಲೆಗಳನ್ನು, ಅರ್ಜಿ ಶುಲ್ಕವನ್ನು ಸಲ್ಲಿಸತಕ್ಕದ್ದು ಹಾಗೂ ದೀರ್ಘಾವಧಿ–ಮುಕ್ತ ಅವಕಾಶದ ಸಂದರ್ಭದಲ್ಲಿ, ಹೆಚ್ಚುವರಿ ಸಾಮರ್ಥ್ಯಕ್ಕಾಗಿ ಅಗತ್ಯವಾದಷ್ಟು ಬ್ಯಾಂಕ್ ಗ್ಯಾರಂಟಿಯನ್ನು ಸಲ್ಲಿಸತಕ್ಕದ್ದು ಮತ್ತು ಅಸ್ತಿತ್ವದಲ್ಲಿರುವ ಜಾಲದಲ್ಲಿ  ಕೋರಿರುವ ಹೆಚ್ಚುವರಿ ಸಾಮರ್ಥ್ಯದ ಬೇಡಿಕೆಯನ್ನು ಪೂರೈಕೆ ಮಾಡಲಾಗದಿದ್ದರೆ,

ಅರ್ಜಿದಾರನಿಗೆ ಮೂಲ ಹಂಚಿಕೆಯಲ್ಲಿ ಕೊಟ್ಟಿರುವ ವಿದ್ಯುತ್ ಸಾಮರ್ಥ್ಯದ ಮಟ್ಟಿಗೆ ಮುಕ್ತ ಅವಕಾಶಕ್ಕೆ ಅರ್ಜಿದಾರನು ಅರ್ಹನಾಗಿರುತ್ತಾನೆ.

(2) ಅರ್ಜಿಯು ಪೂರ್ಣವಾಗಿದ್ದರೆ ಹಾಗೂ ಅದರ ಜೊತೆಗೆ ಸಂಬಂಧಪಟ್ಟ ದಾಖಲೆಗಳು ಮತ್ತು ಶುಲ್ಕ ಇದ್ದರೆ ಮಾತ್ರ ನೋಡಲ್ ಏಜೆನ್ಸಿಯು, ಅರ್ಜಿ ಸ್ವೀಕರಿಸಿದ ದಿನದ ನಂತರದ ಕೆಲಸದ ದಿನದ ಕೆಲಸದ ಸಮಯ ಮುಕ್ತಾಯವಾಗುವುದರೊಳಗೆ ಸ್ವೀಕೃತಿಯನ್ನು, ಇ–ಮೇಲ್ ಅಥವಾ ಫ್ಯಾಕ್ಸ್ ಮೂಲಕವೂ ಅಥವಾ ಸಾಮಾನ್ಯವಾಗಿ ರೂಢಿಯಲ್ಲಿರುವ ಯಾವುದೇ ಇತರ ಸಂಪರ್ಕ ವಿಧಾನದ ಮೂಲಕವಾಗಿ ನೀಡತಕ್ಕದ್ದು ಮತ್ತು ಅರ್ಜಿಯನ್ನು ಖುದ್ದಾಗಿ ನೀಡಿದ್ದಲ್ಲಿ, ಅದಕ್ಕೆ ಸ್ವೀಕೃತಿಯನ್ನು, ಅರ್ಜಿಯನ್ನು ಸಲ್ಲಿಸಿದಾಗಲೇ ನೀಡತಕ್ಕದ್ದು.

(3) ಯಾವುದೇ ಅರ್ಜಿಯನ್ನು ಯಾವುದೇ ಲೋಪ ಅಥವಾ ದೋಷಕ್ಕಾಗಿ ತಿರಸ್ಕರಿಸಿದಲ್ಲಿ, ಆ ಬಗ್ಗೆ ಮೇಲೆ ನಿರ್ದಿಷ್ಟಪಡಿಸಿದ ಕಾಲದೊಳಗೆ ಲೋಪ ಅಥವಾ ದೋಷವನ್ನು, ಲಿಖಿತ ರೂಪದಲ್ಲಿ ಅರ್ಜಿದಾರನಿಗೆ ತಿಳಿಸತಕ್ಕದ್ದು ಮತ್ತು ಅರ್ಜಿ ಶುಲ್ಕ ಹಾಗೂ ಬ್ಯಾಂಕ್ ಗ್ಯಾರಂಟಿ ಸಲ್ಲಿಸಿದ್ದಲ್ಲಿ, ಅದನ್ನು ಅರ್ಜಿದಾರನಿಗೆ ಹಿಂದಿರುಗಿಸತಕ್ಕದ್ದು ಮತ್ತು ಅಂಥ ಸಂದರ್ಭದಲ್ಲಿ ಅರ್ಜಿದಾರನು ಲೋಪ ಅಥವಾ ದೋಷವನ್ನು ಸರಿಪಡಿಸಿ ಹೊಸದಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

(4) ವ್ಯವಸ್ಥೆಯ ಲಭ್ಯತೆಯನ್ನು ಮತ್ತು ಮುಕ್ತ ಅವಕಾಶಕ್ಕಾಗಿ ಕೋರಿರುವ ಸಾಮರ್ಥ್ಯಕ್ಕಾಗಿ ಯಾವುದೇ ಪಿಪಿಎ ಇರುವ ಬಗ್ಗೆ ತಿಳಿದುಕೊಳ್ಳುವುದಕ್ಕಾಗಿ ನೋಡಲ್ ಏಜೆನ್ಸಿಯು, ಸ್ವೀಕರಿಸಿದ ಅರ್ಜಿಯನ್ನು, ಅದನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ಕೆಲಸದ ದಿನಗಳೊಳಗೆ ಸಂಬಂಧಪಟ್ಟ ಲೈಸೆನ್ಸ್‌ದಾರನಿ(ರಿ)ಗೆ, ಇ–ಮೇಲ್ ಅಥವಾ ಫ್ಯಾಕ್ಸ್ ಮೂಲಕ ಅಥವಾ ಸಾಮಾನ್ಯವಾಗಿ ರೂಢಿಯಲ್ಲಿರುವ ಯಾವುದೇ ಇತರ ಸಂಪರ್ಕ ವಿಧಾನದ ಮೂಲಕವಾಗಿ ಕಳುಹಿಸಿಕೊಡತಕ್ಕದ್ದು.

(5) ಸಂಬಂಧಪಟ್ಟ ಲೈಸೆನ್ಸ್‌ದಾರ(ರು), ಅರ್ಜಿಯ ಸ್ವೀಕೃತಿಯನ್ನು ಮುಂದಿನ ಕೆಲಸದ ದಿನದ ಕೆಲಸದ ಸಮಯ ಮುಕ್ತಾಯವಾಗುವುದರ ಒಳಗೆ, ಇ–ಮೇಲ್ ಅಥವಾ ಫ್ಯಾಕ್ಸ್ ಮೂಲಕ ನೀಡತಕ್ಕದ್ದು.

(6) ವ್ಯವಸ್ಥೆಯ ಅಧ್ಯಯನದ ಆಧಾರದ ಮೇಲೆ ಅಥವಾ ಇತರ ಆಧಾರಗಳ ಮೇಲೆ, ಸಂಬಂಧಪಟ್ಟ ಲೈಸೆನ್ಸ್‌ದಾರನು ಜಾಲದ ಸಾಮರ್ಥ್ಯದ ಲಭ್ಯತೆಯನ್ನು ಮತ್ತು ಮುಕ್ತ ಅವಕಾಶಕ್ಕಾಗಿ ಕೋರಿದ ಸಾಮರ್ಥ್ಯಕ್ಕಾಗಿ ಯಾವುದೇ ಪಿಪಿಎ ಇರುವ ಬಗ್ಗೆ ತಿಳಿದುಕೊಂಡ ತರುವಾಯ, ಇ–ಮೇಲ್ ಅಥವಾ ಫ್ಯಾಕ್ಸ್ ಮೂಲಕ ಅಥವಾ ಸಾಮಾನ್ಯವಾಗಿ ರೂಢಿಯಲ್ಲಿರುವ ಯಾವುದೇ ಇತರ ಸಂಪರ್ಕ ವಿಧಾನದ ಮೂಲಕ ಕೆಳಗೆ ನಿಗದಿಪಡಿಸಿದ ಸಮಯದೊಳಗೆ ತನ್ನ ಸಹಮತವನ್ನು ಅಥವಾ ಅನ್ಯಥಾ ತಿಳಿಸತಕ್ಕದ್ದು, ಎಂದರೆ:–

(i) ಅಲ್ಪಾವಧಿ ಮುಕ್ತ ಅವಕಾಶಕ್ಕೆ– ನೋಡಲ್ ಏಜೆನ್ಸಿಯಿಂದ ಅರ್ಜಿಯನ್ನು ಸ್ವೀಕರಿಸಿದ ಐದು ಕೆಲಸದ ದಿನಗಳೊಳಗೆ;

(ii) ದೀರ್ಘಾವಧಿ ಮುಕ್ತ ಅವಕಾಶಕ್ಕೆ– ನೋಡಲ್ ಏಜೆನ್ಸಿಯಿಂದ ಅರ್ಜಿಯನ್ನು ಸ್ವೀಕರಿಸಿದ ಹದಿನೈದು ಕೆಲಸದ ದಿನಗಳೊಳಗೆ:

ಪರಂತು, ದೀರ್ಘಾವಧಿ ಮುಕ್ತ ಅವಕಾಶದ ಸಂದರ್ಭದಲ್ಲಿ, ಅಸ್ತಿತ್ವದಲ್ಲಿರುವ ವ್ಯವಸ್ಥೆಯ ಸಾಮರ್ಥ್ಯವನ್ನು ಹೆಚ್ಚಿಸುವ ಅಗತ್ಯವಿದ್ದರೆ, ಅಗತ್ಯವಿರುವ ಕಾಲಾವಧಿಯನ್ನು ಮತ್ತು ಮುಕ್ತ ಅವಕಾಶಕ್ಕೆ ಮಂಜೂರಾತಿ ನೀಡಲು ಸಾಧ್ಯತೆಯಿರುವ ದಿನಾಂಕವನ್ನು, ಮೇಲೆ ನಿಗದಿಪಡಿಸಿದ ಕಾಲದೊಳಗೆ ಅರ್ಜಿದಾರನಿಗೆ ತಿಳಿಸತಕ್ಕದ್ದು:

ಮತ್ತು ಪರಂತು, ಈಗಾಗಲೇ ಇಂಜೆಕ್ಟ್ ಮಾಡುತ್ತಿರುವ ಸಾಮರ್ಥ್ಯವನ್ನು ಮೀರಿ ಯಾವುದೇ ಹೆಚ್ಚುವರಿ ವಿದ್ಯುಚ್ಛಕ್ತಿಯನ್ನು ಇಂಜೆಕ್ಟ್ ಮಾಡುವುದಿಲ್ಲ ಎಂಬ ಷರತ್ತಿಗೆ ಒಳಪಟ್ಟು, ಲೈಸೆನ್ಸ್‌ದಾರ(ರ) ಜಾಲದಲ್ಲಿ ಈಗಾಗಲೇ ವಿದ್ಯುಚ್ಛಕ್ತಿಯನ್ನು ಪಿಪಿಎ ಮೇರೆಗೆ ಅಥವಾ ಅನ್ಯಥಾ ನೀಡುತ್ತಿರುವ ಪ್ರಸಕ್ತ ವಿದ್ಯುತ್ ಉತ್ಪಾದಕರಿಗೆ ವಿದ್ಯುಚ್ಛಕ್ತಿಯನ್ನು ಇಂಜೆಕ್ಟ್ ಮಾಡುವ ಸ್ಥಳದಲ್ಲಿ ವ್ಯವಸ್ಥೆಯ ಲಭ್ಯತೆಯನ್ನು ತಿಳಿದುಕೊಳ್ಳಲು ಅಧ್ಯಯನದ ಅಗತ್ಯವಿರುವುದಿಲ್ಲ:

ಮತ್ತೂ ಪರಂತು, ಮುಕ್ತ ಅವಕಾಶವನ್ನು ಪಡೆದುಕೊಳ್ಳುವ ಲೈಸೆನ್ಸುದಾರನ ಗ್ರಾಹಕನು ಮುಕ್ತ ಅವಕಾಶವನ್ನು ಆಯ್ಕೆ ಮಾಡಿದ ತರುವಾಯವೂ ಲೈಸೆನ್ಸುದಾರನೊಂದಿಗೆ ತಾನು ಮಾಡಿಕೊಂಡ ಸರಬರಾಜು ಒಪ್ಪಂದದಲ್ಲಿ ನಿರ್ದಿಷ್ಟಪಡಿಸಿದ ಕರಾರು ಬೇಡಿಕೆಯನ್ನು ತಾನು ಮೀರುವುದಿಲ್ಲವೆಂದು ಮುಚ್ಚಳಿಕೆಯನ್ನು ಬರೆದುಕೊಟ್ಟಲ್ಲಿ, ಅಂಥ ಗ್ರಾಹಕನಿಗೆ ವಿದ್ಯುಚ್ಛಕ್ತಿಯನ್ನು

ತೆಗೆದುಕೊಳ್ಳುವ ಸ್ಥಳದಲ್ಲಿನ ವ್ಯವಸ್ಥೆಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು, ಅಧ್ಯಯನದ ಅಗತ್ಯವಿರುವುದಿಲ್ಲ.

ಅಲ್ಲದೇ ಪರಂತು, ಸಂಬಂಧಪಟ್ಟ ಲೈಸೆನ್ಸುದಾರನು, ಮೇಲೆ ನಿರ್ದಿಷ್ಟಪಡಿಸಿದ ಅವಧಿಯೊಳಗೆ, ಮುಕ್ತ ಅವಕಾಶಕ್ಕೆ ತನ್ನ ಸಹಮತ ಅಥವಾ ಅನ್ಯಥಾ ತಿಳಿಸಲು ತಪ್ಪಿದಲ್ಲಿ, ಮುಕ್ತ ಅವಕಾಶಕ್ಕಾಗಿ ಸಲ್ಲಿಸಿದ ಅರ್ಜಿಗೆ ಆತ ತನ್ನ ಸಹಮತವನ್ನು ನೀಡಿದ್ದಾನೆಂದು ಭಾವಿಸತಕ್ಕದ್ದು.

(7) ನೋಡಲ್ ಏಜೆನ್ಸಿಯು, ಸಂಬಂಧಪಟ್ಟ ಎಲ್ಲಾ ಲೈಸೆನ್ಸುದಾರರಿಂದ ಸಹಮತಿ ಅಥವಾ ಅನ್ಯಥಾ ಅನ್ನು ಸ್ವೀಕರಿಸಿದ ದಿನದಿಂದ ಮೂರು ಕೆಲಸದ ದಿನಗಳೊಳಗಾಗಿ, ಅರ್ಜಿದಾರನಿಗೆ ಮುಕ್ತ ಅವಕಾಶಕ್ಕೆ ಮಂಜೂರಾತಿ ಅಥವಾ ಅನ್ಯಥಾ ಅನ್ನು, ಇ–ಮೇಲ್ ಅಥವಾ ಫ್ಯಾಕ್ಸ್ ಮೂಲಕವಾಗಿ ಅಥವಾ ಸಾಮಾನ್ಯವಾಗಿ ಮಾನ್ಯತೆ ಪಡೆದಿರುವ ಯಾವುದೇ ಇತರ ಸಂಪರ್ಕ ವಿಧಾನದ ಮೂಲಕ ತಿಳಿಸತಕ್ಕದ್ದು. ಅಲ್ಪಾವಧಿ ಮುಕ್ತ ಅವಕಾಶದ ಸಂದರ್ಭದಲ್ಲಿ, ಅರ್ಜಿಯನ್ನು ದಾಖಲು ಮಾಡಿದ ದಿನಾಂಕದಿಂದ ಐದು ಕೆಲಸದ ದಿನಗಳೊಳಗಾಗಿ ಮತ್ತು ದೀರ್ಘಾವಧಿ ಮುಕ್ತ ಅವಕಾಶದ ಸಂದರ್ಭದಲ್ಲಿ ಅರ್ಜಿಯನ್ನು ದಾಖಲು ಮಾಡಿದ ದಿನಾಂಕದಿಂದ ಹದಿನೈದು ಕೆಲಸದ ದಿನಗಳೊಳಗಾಗಿ, ನೋಡಲ್ ಏಜೆನ್ಸಿಯು ಅರ್ಜಿದಾರನಿಗೆ ಮಂಜೂರಾತಿ ಅಥವಾ ಅನ್ಯಥಾ ತಿಳಿಸಲು ವಿಫಲವಾದಲ್ಲಿ, ವ್ಯವಸ್ಥೆಯ ಲಭ್ಯತೆಗೆ ಒಳಪಟ್ಟು, ಕೋರಲಾಗಿದ್ದ ಮುಕ್ತ ಅವಕಾಶವು ಮಂಜೂರಾಗಿದೆಯೆಂದು ಭಾವಿಸತಕ್ಕದ್ದು.

ಪರಂತು, ಭಾವಿತ ಅನುಮೋದನೆಯ ಸಂದರ್ಭದಲ್ಲಿ, ವ್ಯವಸ್ಥೆಯನ್ನು ಬಲಪಡಿಸದೆ ಮುಕ್ತ ಅವಕಾಶಕ್ಕೆ ಅನುಮತಿಸಲಾಗುವುದಿಲ್ಲವೆಂದು ನೋಡಲ್ ಏಜೆನ್ಸಿಯು ಭಾವಿಸಿದ್ದಲ್ಲಿ, ಅದು ವ್ಯವಸ್ಥೆಯ ಬಲವರ್ಧನೆಗಾಗಿನ ಕಾಮಗಾರಿ ಎಷ್ಟೆಂಬುದನ್ನು ಗುರುತಿಸತಕ್ಕದ್ದು ಮತ್ತು ವಿದ್ಯುಚ್ಛಕ್ತಿಯ ವೀಲಿಂಗ್‌ಗಾಗಿನ ಒಪ್ಪಂದವನ್ನು ಸ್ವೀಕರಿಸಿದ ದಿನಾಂಕದಿಂದ ಐದು ಕೆಲಸದ ದಿನಗಳೊಳಗೆ ಮುಕ್ತ ಅವಕಾಶಕ್ಕೆ ಅನುಮತಿಸಬಹುದಾದ ಸಂಭಾವ್ಯ ದಿನಾಂಕವನ್ನು ತದನುಸಾರವಾಗಿ ಲಿಖಿತ ರೂಪದಲ್ಲಿ ಅರ್ಜಿದಾರನಿಗೆ ತಿಳಿಸತಕ್ಕದ್ದು.

ಮತ್ತು ಪರಂತು, ಮುಕ್ತ ಅವಕಾಶ ಮಂಜೂರಾತಿಗಾಗಿ ಅರ್ಜಿಯು ಇತ್ಯರ್ಥದಲ್ಲಿರುವ ಅವಧಿಯಲ್ಲಿ, ಅರ್ಜಿದಾರನು ಲೈಸೆನ್ಸುದಾರನ ವಿದ್ಯುತ್‌ಜಾಲಕ್ಕೆ ಯಾವುದೇ ವಿದ್ಯುಚ್ಛಕ್ತಿಯನ್ನು ಇಂಜೆಕ್ಟ್ ಮಾಡತಕ್ಕದ್ದಲ್ಲ ಮತ್ತು ಅಂಥ

ಅವಧಿಯಲ್ಲಿ ಇಂಜೆಕ್ಟ್‌ಮಾಡಿದ ವಿದ್ಯುಚ್ಛಕ್ತಿಗಾಗಿ ಯಾವುದೇ ಹಣವನ್ನು ಅರ್ಜಿದಾರನಿಗೆ ಪಾವತಿಸುವುದಕ್ಕೆ ಲೈಸೆನ್ಸುದಾರನು ಹೊಣೆಗಾರನಾಗಿರುವುದಿಲ್ಲ.

ಮತ್ತೂ ಪರಂತು, ಮುಕ್ತ ಅವಕಾಶಕ್ಕೆ ಮಂಜೂರಾತಿ ನೀಡಿದ ದಿನಾಂಕದಿಂದ ವೀಲಿಂಗ್‌ಗಾಗಿನ ಒಪ್ಪಂದವನ್ನು ಸಲ್ಲಿಸುವ ದಿನಾಂಕದವರೆಗೆ ಲೈಸೆನ್ಸುದಾರನ ವಿದ್ಯುತ್ ಜಾಲದಲ್ಲಿ ಇಂಜೆಕ್ಟ್ ಮಾಡಿದ ಯಾವುದೇ ವಿದ್ಯುಚ್ಛಕ್ತಿಗಾಗಿ, ಅರ್ಜಿದಾರನು ಸರಾಸರಿ ಒಟ್ಟು ಸಂಗ್ರಹಿತ ವಿದ್ಯುಚ್ಛಕ್ತಿಯ ಖರೀದಿ ಬೆಲೆಯ (ಎಪಿಪಿಸಿ) ದರದಲ್ಲಿ ಹಣ ಪಡೆಯಲು ಅರ್ಹನಾಗಿರುತ್ತಾನೆ.

(8) ಮುಕ್ತ ಅವಕಾಶ ಮಂಜೂರಾತಿ ಪಡೆದ ಗ್ರಾಹಕನು, ವಿದ್ಯುಚ್ಛಕ್ತಿಯ ವೀಲಿಂಗ್‌ಗಾಗಿನ ಒಪ್ಪಂದವನ್ನು, ಸಂದರ್ಭಾನುಸಾರವಾಗಿ ದ್ವಿಪ್ರತಿ ಅಥವಾ ತ್ರಿಪ್ರತಿಗಳಲ್ಲಿ ಬರೆದುಕೊಡತಕ್ಕದ್ದು ಮತ್ತು ಸಂದರ್ಭಾನುಸಾರವಾಗಿ ಮುಕ್ತ ಅವಕಾಶಕ್ಕಾಗಿನ ಮಂಜೂರಾತಿಯ ಮಾಹಿತಿಯನ್ನು ಸ್ವೀಕರಿಸಿದ ದಿನದಿಂದ ಅಥವಾ ಅಂಥ ಮುಕ್ತ ಅವಕಾಶಕ್ಕೆ ಭಾವಿತ ಮಂಜೂರಾತಿ ದೊರೆತ ದಿನಾಂಕದಿಂದ ಐದು ಕೆಲಸದ ದಿನಗಳೊಳಗಾಗಿ ನೋಡಲ್ ಏಜೆನ್ಸಿಗೆ ಮತ್ತು ಸಂಬಂಧಪಟ್ಟ ಲೈಸೆನ್ಸುದಾರನಿ(ರಿ)ಗೆ ಅದನ್ನು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಮಂಜೂರಾದ ಅಥವಾ ಮಂಜೂರಾಗಿದೆಯೆಂದು ಭಾವಿಸಲಾದ ಮುಕ್ತ ಅವಕಾಶವು ರದ್ದಾಗತಕ್ಕದ್ದು.

ಪರಂತು, ಮುಕ್ತ ಅವಕಾಶದ ಭಾವಿತ ಮಂಜೂರಾತಿಯ ಸಂದರ್ಭದಲ್ಲಿ, ವಿದ್ಯುಚ್ಛಕ್ತಿಯ ವೀಲಿಂಗ್‌ಗಾಗಿನ ಒಪ್ಪಂದದ ಜೊತೆಯಲ್ಲಿ, ಅರ್ಜಿದಾರನು, ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ನೋಡಲ್ ಏಜೆನ್ಸಿಯು ಮುಕ್ತ ಅವಕಾಶದ ಅನುಮೋದನೆ ಅಥವಾ ಅನ್ಯಥಾ ಅನ್ನು ತಿಳಿಸಲು ವಿಫಲವಾಗಿದೆ ಎಂಬ ಹೇಳಿಕೆಯನ್ನು, ವಿಧ್ಯುಕ್ತವಾಗಿ ನೋಟರಿಯಿಂದ ಸಹಿ ಮಾಡಿಸಿ, ನೋಡಲ್ ಏಜೆನ್ಸಿಗೆ ಒಂದು ಮುಚ್ಚಳಿಕೆಯನ್ನು ಸಲ್ಲಿಸತಕ್ಕದ್ದು ಮತ್ತು ನೋಡಲ್ ಏಜೆನ್ಸಿಗೆ ಅರ್ಜಿಯನ್ನು ಬಟವಾಡೆ ಮಾಡಲಾದುದಕ್ಕೆ ನೋಡಲ್ ಏಜೆನ್ಸಿಯು ನೀಡಿರುವ ಸ್ವೀಕೃತಿ ಯಾವುದಾದರೂ ಇದ್ದಲ್ಲಿ ಅದರ ಅಥವಾ ಇರುವ ಯಾವುದೇ ಇತರ ಸಾಕ್ಷ್ಯದ ಪ್ರತಿಯನ್ನು ಲಗತ್ತಿಸತಕ್ಕದ್ದು.

(9) ಮೇಲೆ ಹೇಳಿದ ಒಪ್ಪಂದವನ್ನು ಸ್ವೀಕರಿಸಿದ ನಂತರ ಸಂಬಂಧಪಟ್ಟ ಲೈಸೆನ್ಸುದಾರ(ರು), ತನ್ನ/ತಮ್ಮ ಒಪ್ಪಂದದ ಪ್ರತಿಗೆ ಸಹಿಮಾಡಿ ವಿದ್ಯುಚ್ಛಕ್ತಿಯ ವೀಲಿಂಗ್ ಒಪ್ಪಂದವನ್ನು ಕಾರ್ಯಗತಗೊಳಿಸತಕ್ಕದ್ದು ಮತ್ತು ಅಂಥ

ಒಪ್ಪಂದವನ್ನು ಸ್ವೀಕರಿಸಿದ ದಿನದಿಂದ ಮುಂದಿನ ಏಳು ಕೆಲಸದ ದಿನಗಳೊಳಗಾಗಿ, ಅದನ್ನು ನೋಡಲ್ ಏಜೆನ್ಸಿಗೆ ಸಹಿ ಮಾಡಿ ಕಳುಹಿಸತಕ್ಕದ್ದು.

(10) ಅರ್ಜಿದಾರನು ವಿದ್ಯುಚ್ಛಕ್ತಿಯ ವೀಲಿಂಗ್ ಕಾರ್ಯಾಚರಣೆಯನ್ನು ಪ್ರಾರಂಭಿಸುವ ಜಾರಿ ದಿನಾಂಕವು ಲೈಸೆನ್ಸುದಾರನು ಮೇಲೆ ಹೇಳಿದ ವಿನಿಯಮ (8)ರಲ್ಲಿ ನಿರ್ದಿಷ್ಟಪಡಿಸಿದ ವೀಲಿಂಗ್‌ಗಾಗಿನ ಒಪ್ಪಂದವನ್ನು ಸ್ವೀಕರಿಸಿದ ದಿನಾಂಕವಾಗಿರತಕ್ಕದ್ದು:
ಪರಂತು, ಮೇಲೆ ಹೇಳಿದ ಜಾರಿ ದಿನಾಂಕವು, ಸೌರವಿದ್ಯುತ್, ವಾಯು ಮತ್ತು ಕಿರು–ಜಲವಿದ್ಯುತ್ ಯೋಜನೆಗಳ ಸಂದರ್ಭದಲ್ಲಿ ಬ್ಯಾಂಕಿಂಗ್‌ಗಾಗಿ ಕೂಡಾ ಅನ್ವಯವಾಗತಕ್ಕದ್ದು.

(11) ದೀರ್ಘಾವಧಿ ಮುಕ್ತ ಅವಕಾಶವನ್ನು ಕೋರಿರುವ ಮತ್ತು ವೀಲಿಂಗ್‌ಗಾಗಿ ಒಪ್ಪಂದವನ್ನು ಮಾಡಿಕೊಂಡಿರುವ ಹೊಸ ವಿದ್ಯುತ್ ಉತ್ಪಾದನಾ ಸ್ಥಾವರ (ಸ್ಥಾವರಗಳು) ಅಥವಾ ವಿದ್ಯುತ್ ಉತ್ಪಾದನಾ ಘಟಕ(ಗಳು), ವೀಲಿಂಗ್ ಪ್ರಾರಂಭ ಜಾರಿ ದಿನಾಂಕದಿಂದ ಹನ್ನೆರಡು ತಿಂಗಳುಗಳೊಳಗೆ ಅಂಥ ಸ್ಥಾವರವನ್ನು (ಸ್ಥಾವರಗಳನ್ನು) ಅಥವಾ ಘಟಕವನ್ನು(ಗಳನ್ನು) ಕಾರ್ಯಾಚರಣೆಗೊಳಿಸತಕ್ಕದ್ದು, ತಪ್ಪಿದ್ದಲ್ಲಿ ಮುಕ್ತ ಅವಕಾಶದ ಮಂಜೂರಾತಿಯು ರದ್ದಾಗಿದೆ ಎಂದು ಭಾವಿಸತಕ್ಕದ್ದು.

(12) ಮುಕ್ತ ಪ್ರವೇಶವಕಾಶವನ್ನು ಪಡೆದಿರುವ ಗ್ರಾಹಕನು, ಉತ್ಪಾದಕರೊಂದಿಗೆ, ವ್ಯಾಪಾರಿಗಳೊಂದಿಗೆ, ಗ್ರಾಹಕರೊಂದಿಗೆ ಮತ್ತು ಇತರರೊಂದಿಗೆ ಅನ್ವಯವಾಗುವಂತೆ ವಾಣಿಜ್ಯ ಒಪ್ಪಂದಗಳನ್ನು ಮಾಡಿಕೊಳ್ಳತಕ್ಕದ್ದು ಮತ್ತು ಅಂಥ ಒಪ್ಪಂದಗಳು ಹಣ ಪಾವತಿ ಭದ್ರತೆ ಕಾರ್ಯತಂತ್ರದ ಕುರಿತು ಉಪಬಂಧಗಳನ್ನು ಒಳಗೊಂಡಿರತಕ್ಕದ್ದು.

(13) ನೋಡಲ್ ಏಜೆನ್ಸಿಯು, ಮೇಲೆ ಹೇಳಿದ ಖಂಡ (1)ರ ಅಡಿಯಲ್ಲಿ ಸ್ವೀಕರಿಸಿದ ಪ್ರತಿಯೊಂದು ಅರ್ಜಿಯ ವಿವರಗಳನ್ನು ಮತ್ತು ಅಂಥ ಅರ್ಜಿಯ ಸ್ಥಾನಮಾನವನ್ನು ನಿರಂತರ ಆಧಾರದ ಮೇಲೆ ತನ್ನ ಅಂತರ್ಜಾಲದಲ್ಲಿ ಪ್ರಕಟಿಸತಕ್ಕದ್ದು ಮತ್ತು ಸಾರ್ವಜನಿಕರಿಗೆ ಅದು ಲಭ್ಯವಾಗುವಂತೆ ಮಾಡತಕ್ಕದ್ದು.

(14) ನೋಡಲ್ ಏಜೆನ್ಸಿಯು ಅಗತ್ಯವಾದಂತೆ ನಿರ್ದಿಷ್ಟ ವಿದ್ಯುಚ್ಛಕ್ತಿ ನಿರ್ದಿಷ್ಟ ವೀಲಿಂಗ್ ಒಪ್ಪಂದದ ನಮೂನೆಗಳನ್ನು ಸಿದ್ಧಪಡಿಸಿ, ಆಯೋಗದಿಂದ ವಿದ್ಯುಕ್ತ ಅನುಮೋದನೆಯನ್ನು ಪಡೆಯತಕ್ಕದ್ದು ಮತ್ತು ಸಾರ್ವಜನಿಕರಿಗೆ ನಿರ್ದಿಷ್ಟ ಒಪ್ಪಂದದ ನಮೂನೆಗಳು ಲಭ್ಯವಾಗುವಂತೆ ಮಾಡತಕ್ಕದ್ದು ಹಾಗೂ ನೋಡಲ್ ಏಜೆನ್ಸಿಯ ಅಂತರ್ಜಾಲದಲ್ಲಿ ಅಂಥ ಒಪ್ಪಂದದ ನಮೂನೆಗಳನ್ನು ಪ್ರಕಟಿಸತಕ್ಕದ್ದು.

ಪರಂತು, ಈ ವಿನಿಯಮಗಳ ಅಧಿಸೂಚನೆಯ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ನೋಡಲ್ ಏಜೆನ್ಸಿಯು ಆಯೋಗದ ಅನುಮೋದನೆಗಾಗಿ ನಿರ್ದಿಷ್ಟ ಒಪ್ಪಂದಗಳನ್ನು ಸಲ್ಲಿಸತಕ್ಕದ್ದು.

ಮತ್ತು ಪರಂತು, ಆಯೋಗವು ಅನುಮೋದಿಸಿದ ಪ್ರಸ್ತುತ ಒಪ್ಪಂದದ ನಮೂನೆಗಳು, ನೋಡೆಲ್ ಏಜೆನ್ಸಿಯು ತಿದ್ದುಪಡಿ ಮಾಡಿ, ಆಯೋಗವು ಅನುಮೋದಿಸುವವರೆಗೆ, ಜಾರಿಯಲ್ಲಿರತಕ್ಕದ್ದು.

(15) ರಾಜ್ಯ ಪ್ರಸರಣ ಸಂಸ್ಥೆ (ಎಸ್‌ಟಿಯು) ಅಥವಾ ಹಂಚಿಕೆ ಲೈಸೆನ್ಸುದಾರನು(ರು) ವಾರ್ಷಿಕವಾಗಿ ಅಥವಾ ಅಗತ್ಯವಾದಾಗಲೆಲ್ಲ ಅಥವಾ ಆಯೋಗವು ನಿರ್ದೇಶಿಸಿದಾಗ, ವ್ಯವಸ್ಥೆ ಅಧ್ಯಯನಗಳನ್ನು ನಡೆಸತಕ್ಕದ್ದು ಮತ್ತು ಲಭ್ಯವಿರುವ ಲೈನುಗಳ ಹೆಚ್ಚುವರಿ ಲೋಡಿಂಗ್ ಸಾಮರ್ಥ್ಯವು ಒಳಗೊಂಡಂತೆ ವ್ಯವಸ್ಥೆ ದತ್ತಾಂಶವನ್ನು ನಿರಂತರ ಆಧಾರದ ಮೇಲೆ ಸಿದ್ಧಪಡಿಸತಕ್ಕದ್ದು ಮತ್ತು ಅದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡತಕ್ಕದ್ದು ಹಾಗೂ ಅಂಥ ದತ್ತಾಂಶವನ್ನು ಲೈಸೆನ್ಸುದಾರನ(ರ) ಅಂತರ್ಜಾಲತಾಣದಲ್ಲಿ ಕೂಡಾ ಪ್ರಕಟಿಸತಕ್ಕದ್ದು.

ಪರಂತು, ಅಂಥ ಅಧ್ಯಯನಗಳಿಗೆ ಯಾರೇ ವ್ಯಕ್ತಿಯು ಕೋರಿಕೆಯನ್ನು ಸಲ್ಲಿಸಿದ್ದಲ್ಲಿ, ಎಸ್‌ಟಿಯು/ವಿತರಣಾ ಲೈಸೆನ್ಸುದಾರನು ಸೂಕ್ತ ಹಣವನ್ನು ಪಡೆದು ವ್ಯವಸ್ಥೆ ಅಧ್ಯಯನಗಳನ್ನು ಕೈಗೊಳ್ಳತಕ್ಕದ್ದು ಮತ್ತು ಅಧ್ಯಯನಕ್ಕಾಗಿ ಚಾರ್ಜುಗಳನ್ನು ಸ್ವೀಕರಿಸಿದ ದಿನಾಂಕದಿಂದ ತೊಂಬತ್ತು ದಿನಗಳೊಳಗಾಗಿ ಅಂಥ ಅಧ್ಯಯನಗಳನ್ನು ಪೂರ್ಣಗೊಳಿಸತಕ್ಕದ್ದು ಮತ್ತು ಅಂಥ ವ್ಯಕ್ತಿಗೆ ವಿವರವಾದ ವರದಿಯೊಂದನ್ನು ಬರಹದಲ್ಲಿ ನೀಡತಕ್ಕದ್ದು.

**(9–ಎ) ಒಂದು ದಿನ ಮುಂಚಿತವಾದ ವ್ಯವಹಾರಗಳಿಗಾಗಿ ಅರ್ಜಿ ಸಲ್ಲಿಸುವುದಕ್ಕಾಗಿನ ಕಾರ್ಯವಿಧಾನ.–**

(i) ಒಂದು ದಿನ ಮೊದಲು ಮುಕ್ತ ಪ್ರವೇಶಾವಕಾಶಕ್ಕೆ ಮಂಜೂರಾತಿ ನೀಡುವುದಕ್ಕೆ ಅರ್ಜಿಯನ್ನು ವೀಲಿಂಗ್‌ನ ನಿಗದಿತ ದಿನಾಂಕಕ್ಕೆ ಮುಂಚಿನ ಮೂರು ದಿವಸಗಳೊಳಗಾಗಿ, ಆದರೆ ವೀಲಿಂಗ್ ವ್ಯವಹಾರಕ್ಕಾಗಿ ನಿಗದಿಪಡಿಸಿದ ದಿನಕ್ಕೆ ಒಂದು ದಿನ–ಮುಂಚಿನ ನಿಕಟಪೂರ್ವದ ದಿನದ 13:00 ಗಂಟೆಗೆ ಮೀರದಂತೆ, ನೋಡಲ್ ಏಜೆನ್ಸಿಗೆ ಸಲ್ಲಿಸತಕ್ಕದ್ದು. ಉದಾರಣೆಗೆ, ವ್ಯವಹಾರವು ಜುಲೈ 25ನೇ ದಿನದಂದು ನಡೆಯುವುದಾಗಿದ್ದರೆ, ಅದಕ್ಕೆ ಮುಂಚೆ ಅರ್ಜಿಯನ್ನು ಸಲ್ಲಿಸತಕ್ಕದ್ದು, ಎಂದರೆ, ಆ ತಿಂಗಳ 22ನೇ ದಿನ ಅಥವಾ 23ನೇ ದಿನ ಅಥವಾ 24ನೇ ದಿನದ 13:00 ಗಂಟೆಗಳವರೆಗೆ ಸಲ್ಲಿಸತಕ್ಕದ್ದು.

(ii) ನೋಡಲ್ ಏಜೆನ್ಸಿಗೆ ಸಲ್ಲಿಸಲಾಗುವ ಅರ್ಜಿಯಲ್ಲಿ, ಅಗತ್ಯವಿರುವ ಸಾಮರ್ಥ್ಯ, ಯೋಜಿಸಲಾದ ಉತ್ಪಾದನೆ ಅಥವಾ ಕರಾರು ಮಾಡಿಕೊಳ್ಳಲಾದ ವಿದ್ಯುತ್ ಖರೀದಿ, ವಿದ್ಯುತ್ ಇಂಜೆಕ್ಷನ್‌ನ ಸ್ಥಳ, ವಿದ್ಯುತ್ ಪಡೆದುಕೊಳ್ಳಬೇಕಾದ ಸ್ಥಳ, ಮುಕ್ತ ಅವಕಾಶವನ್ನು ಪಡೆಯುವ ಅವಧಿ, ಗರಿಷ್ಠ ಲೋಡ್ ಮತ್ತು ಸರಾಸರಿ ಲೋಡ್ ಇಂತಹ ವಿವರಗಳು ಹಾಗೂ ಮುಕ್ತ ಅವಕಾಶದ ಪ್ರಕಾರ ಕೋರಿರುವ ಸಾಮರ್ಥ್ಯಕ್ಕಾಗಿ ಯಾವುದೇ ಅಸ್ತಿತ್ವದಲ್ಲಿರುವ ಪಿಪಿಎ ಯಾವುದೂ ಇಲ್ಲ ಎಂಬ ಒಂದು ಮುಚ್ಚಳಿಕೆ ಹಾಗೂ ನೋಡಲ್ ಏಜೆನ್ಸಿಯು ಅಗತ್ಯಪಡಿಸಬಹುದಾದ ಅಂಥ ಇತರ ಹೆಚ್ಚಿನ ಮಾಹಿತಿಯು ಇರತಕ್ಕದ್ದು.

(iii) ಅರ್ಜಿಯ ಜೊತೆಗೆ, ಪ್ರತಿಯೊಂದು ವ್ಯವಹಾರಕ್ಕೆ ಐದು ಸಾವಿರ ರೂಪಾಯಿಗಳ ಹಿಂತಿರುಗಿಸಲಾಗದ ಅರ್ಜಿ ಶುಲ್ಕವನ್ನು, ನಗದು ರೂಪದಲ್ಲಾಗಲಿ ಅಥವಾ ಡಿಮಾಂಡ್ ಡ್ರಾಫ್ಟ್ ಮೂಲಕ ಅಥವಾ ಅದನ್ನು ನೋಡಲ್ ಏಜೆನ್ಸಿಯ ಪರವಾಗಿ ವಿದ್ಯುನ್ಮಾನ ವರ್ಗಾವಣೆಯ ಮೂಲಕ ಪಾವತಿಸಲಾಗಿರುವ ಬಗ್ಗೆ ರುಜುವಾತಾಗಲಿ ಸಲ್ಲಿಸತಕ್ಕದ್ದು.

(iv) ನೋಡಲ್ ಏಜೆನ್ಸಿಯು, ವಿದ್ಯುತ್ ಜಾಲದಲ್ಲಿನ ದಟ್ಟಣೆಯನ್ನು ಪರೀಕ್ಷಿಸಿ, ವ್ಯವಹಾರಕ್ಕಾಗಿ ನಿಗದಿಪಡಿಸಿದ ಒಂದು ದಿನ ಮುಂಚಿತವಾಗಿ ಎಂದರೆ, ಆ ದಿನದ ನಿಕಟ ಪೂರ್ವದ ದಿನದ 15:00 ಗಂಟೆ ಮೀರದಂತೆ, ಇ–ಮೇಲ್ ಅಥವಾ ಫ್ಯಾಕ್ಸ್ ಮೂಲಕ ಅರ್ಜಿದಾರನಿಗೆ ಅನುಮೋದನೆಯ ಮಂಜೂರಾತಿ ಅಥವಾ ಅನ್ಯಥಾ ಅನ್ನು ತಿಳಿಸತಕ್ಕದ್ದು.

ಪರಂತು, ಮುಕ್ತ ಅವಕಾಶದ ವಾಸ್ತವಿಕ ಕಾರ್ಯಾಚರಣೆಯನ್ನು, ಈ ವಿನಿಯಮಗಳಲ್ಲಿ ಮತ್ತು ಆಯೋಗವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳಲ್ಲಿ ನಿರ್ದಿಷ್ಟಪಡಿಸಿದಂತೆ ಚಾರ್ಜುಗಳನ್ನು ಅರ್ಜಿದಾರನು ದಿನದ ಮುಂಚಿನ ವ್ಯವಹಾರಕ್ಕೆ ನಿಗದಿಪಡಿಸಿದ ದಿನಕ್ಕೆ ಒಂದು ದಿನ ಮುಂಚಿತವಾಗಿ ಎಂದರೆ, ಆ ದಿನದ ನಿಕಟಪೂರ್ವ ದಿನದ 17:00 ಗಂಟೆ ಮುಂಚೆ ಪಾವತಿಸುವುದಕ್ಕೆ ಒಳಪಟ್ಟು ಜಾರಿಗೊಳಿಸತಕ್ಕದ್ದು.

(v) ಮುಕ್ತ ಅವಕಾಶವನ್ನು ನಿರಾಕರಿಸಿದಲ್ಲಿ, ನೋಡಲ್ ಏಜೆನ್ಸಿಯು, ಆ ಬಗ್ಗೆ ಕಾರಣಗಳನ್ನು ಅರ್ಜಿದಾರನಿಗೆ ಒದಗಿಸತಕ್ಕದ್ದು."

**5. ವಿನಿಯಮ 11 (xiii) ರ ತಿದ್ದುಪಡಿ.–**

ಮೂಲ ವಿನಿಯಮಗಳ 11ನೇ ವಿನಿಯಮದ (xiii) ಖಂಡದ ತರುವಾಯ ಬರುವ ಪ್ರಸ್ತುತ ಖಂಡ (xiii) ಕ್ಕೆ (xiv) ಎಂದು ಮರುಸಂಖ್ಯೆಕೊಡತಕ್ಕದ್ದು ಮತ್ತು ಅದನ್ನು ಈ ಮುಂದಿನಂತೆ ಬದಲಿಸತಕ್ಕದ್ದು, ಎಂದರೆ:–

"(xiv) ಮುಕ್ತ ಅವಕಾಶ ಪಡೆದಿರುವ ಗ್ರಾಹಕನು, ವ್ಯವಹಾರದ ವಿವರಗಳ ನಿರ್ವಹಣೆಗಾಗಿ ಎರಡು ಸಾವಿರ ರೂಪಾಯಿಗಳ ಮಾಸಿಕ ವ್ಯವಹಾರ ಚಾರ್ಜುಗಳನ್ನು ನೋಡಲ್ ಏಜೆನ್ಸಿಗೆ ಮತ್ತು ಮೀಟರ್ ರೀಡಿಂಗ್ ಮಾಡುವ ಸಂಬಂಧಪಟ್ಟ ಲೈಸೆನ್ಸುದಾರನಿಗೆ(ರಿಗೆ) ಅದಕ್ಕಾಗಿ ಒಂದು ಸಾವಿರ ರೂಪಾಯಿಗಳ ಮೀಟರ್ ರೀಡಿಂಗ್ ಚಾರ್ಜುಗಳನ್ನು ಸಂದಾಯಮಾಡತಕ್ಕದ್ದು."

ಆಯೋಗದಿಂದ ಅನುಮೋದಿಸಲ್ಪಟ್ಟಿದೆ.

***ಕಾರ್ಯದರ್ಶಿ***
***ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ***